


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್

ಕಲೆ: ಎಚ್.ಎಸ್. ಮೋನಪ್ಪ

# ‘ನಾವು ಒಟ್ಟಾಗಿದ್ದರೆ ನಿಲ್ಲುವೆವು; ಒಡೆದು ಹೋದರೆ ಬೀಳುವೆವು’

ಲೋಕಸಭಾ ಚುನಾವಣೆಯ ಮಳೆ ನಿಂತರೂ ಮರದ ಹನಿ ನಿಂತಿರಲಿಲ್ಲ!

ಲೋಹಿಯಾ ಫೂಲ್‌ಪುರ ಲೋಕಸಭಾ ಕ್ಷೇತ್ರದಲ್ಲಿ ನೆಹರು ವಿರುದ್ಧ ಸೋತರು. ಆದರೂ ಚುನಾವಣೆಯ ಕಾಲದಲ್ಲಿ ಲೋಹಿಯಾ ಎತ್ತಿದ ಪ್ರಶ್ನೆಗಳು ಕಿಡಿ ಹಚ್ಚುತ್ತಲೇ ಇದ್ದವು.

‘ಚುನಾವಣಾ ಪ್ರಚಾರದಲ್ಲಿ ನನ್ನ ಪ್ರತಿ ದಿನದ ಖರ್ಚಿನ ಬಗೆಗೇ ಲೋಹಿಯಾ ಪ್ರಧಾನವಾಗಿ ಮಾತಾಡುತ್ತಿದ್ದರು’ ಎಂದು ನೆಹರು ಚುನಾವಣೆಯ ನಂತರವೂ ಆರೋಪಿಸಿದರು. ನೆಹರು ವಕ್ತಾರರು ಇನ್ನೊಂದು ಹೆಜ್ಜೆ ಮುಂದೆ ಹೋಗಿ, ‘ಲೋಹಿಯಾ ಮಾಡಿದ ಆಪಾದನೆಗೆ ಮತದಾರರು ತಕ್ಕ ಉತ್ತರ ಕೊಟ್ಟಿದ್ದಾರೆ’ ಎನ್ನತೊಡಗಿದರು.

ಈ ಮಾತಿಗೆ ಲೋಹಿಯಾ ಉತ್ತರ ಕೊಟ್ಟರು:

‘ಈ ವಕ್ತಾರರ ವಾದ ಹೀಗಿದೆ: ‘ಮತದಾರರು ನೆಹರುವನ್ನು ಗೆಲ್ಲಿಸಿದ್ದಾರೆ ಮತ್ತು ನನ್ನನ್ನು ಸೋಲಿಸಿದ್ದಾರೆ; ಆದ್ದರಿಂದ ನನ್ನ ಚುನಾವಣಾ ಪ್ರಚಾರದ ಮುಖ್ಯ ವಿಚಾರ ಎಂದು ಇವರೇ ಆಪಾದಿಸಿರುವ ವಿಷಯವನ್ನು– ಅಂದರೆ ಪ್ರಧಾನಮಂತ್ರಿಯವರ ದೈನಂದಿನ ವೆಚ್ಚದ ಪ್ರಶ್ನೆಯನ್ನು– ಜನ ಗಂಭೀರವಾಗಿ ತೆಗೆದುಕೊಳ್ಳಬಾರದು.’

‘ಇದೆಂಥ ಬೇಜವಾಬ್ದಾರಿ ಮಾತು! ಮತದಾರರ ಚುನಾವಣಾ ನಿರ್ಣಯವು ಸರಿ–ತಪ್ಪುಗಳನ್ನು ತೀರ್ಮಾನಿಸುವುದಿಲ್ಲ. ಮತದಾರರ ನಿರ್ಣಯ ಶಾಸನಸಭೆಯಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಯಾವ ಬಗೆಯ ಧೋರಣೆಗಳು ಮೇಲುಗೈ ಪಡೆಯಬೇಕು ಎಂಬುದನ್ನು ನಿರ್ಣಯಿಸುತ್ತದೆ, ಅಷ್ಟೆ.’

